**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 832/2022**

**ಚಾ.ಸಾ.** 1

**ಪ್ರಾ.ಸಾ.** 3

**ದಿನಾಂಕಃ 10.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಶಿವಪ್ಪ ಗದಗ |
| ತಂದೆಃ ಗಂಡನ ಹೆಸರು | ಈಶ್ವರಪ್ಪ |
| ಉದ್ಯೋಗ | ಎ ಎಸ್ ಐ |
| ವಯಸ್ಸು | 59 |
| ವಾಸಸ್ಥಳ | ನವಲಗುಂದ |

**ಪ್ರಾರಂಭ ಸಮಯಃ 12.20 ಪಿ. ಎಂ.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದ**

ನಾನು 2019 ರಿಂದ 2022 ವರೆಗೆ ಎ ಎಸ್ ಐ ಆಗಿ ಕಲಘಟಗಿ ಪೋಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ಸಾಕ್ಷಿಗೆ ದಿನಾಂಕ 19.07.2021 ರ ದೂರನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ2(ಎ)ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ1 ನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ1 (ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಾದರಿ ಶೀಲುಗಳು ಮತ್ತು ಸಹಿಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ3 ರಿಂದ 8 ಎಂದು ಗುರುತಿಸಲಾಯಿತು.

ದಿಃ19.07.2021 ರಂದು ಸಂಜೆ 04.30 ಗಂಟೆ ಸಮಯದಲ್ಲಿ ನಾನು ಮತ್ತು ನಮ್ಮ ಸಿಬ್ಬಂದಿಗಳಾದ ಚಾಸಾ4 ಮತ್ತು 5 ರವರೊಂದಿಗೆ ಕಲಘಟಗಿ ತಾಲೂಕಿನಲ್ಲಿ ಗಸ್ತು ಮಾಡುತ್ತಾ ಬೋಗೆನಾಗರಕೊಪ್ಪ ಗ್ರಾಮದ ಬಳಿ ಬಂದಾಗ, ಸುಮಾರು 06.50 ಗಂಟೆ ಸುಮಾರಿಗೆ ಕಾಮಧೇನು ಗ್ರಾಮದಲ್ಲಿ ಪರಮೇಶ ಚನ್ನಪ್ಪ ಕಟ್ಟಿ ಎನ್ನುವವರು ತಮ್ಮ ಚಹಾದ ಅಂಗಡಿಯ ಮುಂಭಾಗದಲ್ಲಿ ಒಂದು ಚೀಲದಲ್ಲಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾನೆಂದು ನನಗೆ ಬಾತ್ಮಿ ಬಂದ ಮೇರೆಗೆ ಸದರಿ ವಿಚಾರವನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿ, ಕಾಮಧೇನು ಗ್ರಾಮದ ಸಮೀಪದಲ್ಲಿ ಇದ್ದಂತಹ ಪ್ರಾಸಾ1 ಮತ್ತು 2 ರವರನ್ನು ಪಂಚರಾಗಿ ಸಹಕರಿಸುವಂತೆ ಕೋರಿ ಅವರು ಒಪ್ಪಿಕೊಂಡ ಮೇರೆಗೆ ಅವರನ್ನು ಸಹ ನಮ್ಮ ಜೊತೆ ಕರೆದುಕೊಂಡು ಘಟನಾ ಸ್ಥಳಕ್ಕೆ ಸಂಜೆ 07.15 ಕ್ಕೆ ಹೋದೆವು. ಘಟನಾ ಸ್ಥಳದ ಸ್ವಲ್ಪ ದೂರದಲ್ಲಿ ನಿಂತು ನಾವು ವಾಚ್ ಮಾಡಿದೆವು. ಒಬ್ಬ ವ್ಯಕ್ತಿಯು ಸಾರ್ವಜನಿಕರಿಗೆ ಮದ್ಯವನ್ನು ಮಾರಾಟ ಮಾಡುತ್ತಿರುವುದು ಹಾಗೂ ಮೂರು ಜನ ನಿಂತಿರುವುದು ನಮಗೆ ಕಂಡು ಬಂದಿತು. ಆದ್ದರಿಂದ ನಾವು ಪಂಚರ ಸಮಕ್ಷಮ ಸದರಿ ಅಸಾಮಿಗಳ ಮೇಲೆ ದಾಳಿ ಮಾಡಿದೆವು.

ದಾಳಿ ಕಾಲಕ್ಕೆ ಮದ್ಯವನ್ನು ಮಾರಾಟ ಮಾಡುತ್ತಿದ್ದಂತಹ ವ್ಯಕ್ತಿಯು ತಪ್ಪಿಸಿಕೊಂಡು ಓಡಿ ಹೋದನು. ನಮ್ಮ ಸಿಬ್ಬಂದಿ ಆತನನ್ನು ಹಿಡಿಯಲು ಪ್ರಯತ್ನಿಸಿದರು ಸಹ ಸಿಗಲಿಲ್ಲ. ಸದರಿ ಗ್ರಾಮದಲ್ಲಿ ಇದ್ದಂತಹ ಗ್ರಾಮಸ್ಥರನ್ನು ಕೇಳಲಾಗಿ ಓಡಿ ಹೋದಂತಹ ವ್ಯಕ್ತಿಯ ಹೆಸರು ಪರಮೇಶ ಚನ್ನಪ್ಪ ಕಟ್ಟಿ ಎಂದು ತಿಳಿಸಿದರು. ಆತನ ವಿರುದ್ಧ ಪೊಲೀಸ ಠಾಣೆಯಲ್ಲಿ ಇತರ ಪ್ರಕರಣಗಳು ಇವೆ ಎಂದು ನನಗೆ ತಿಳಿಯಿತು. ಪಂಚರ ಸಮಕ್ಷಮ ಸ್ಥಳವನ್ನು ಪರಿಶೀಲಿಸಲಾಗಿ ಅಲ್ಲಿ ಒಂದು ಚೀಲವಿದ್ದು, ಸದರಿ ಚೀಲವನ್ನು ತೆರೆದು ನೋಡಲಾಗಿ ಅದರಲ್ಲಿ 90 ಎಮ್ ಎಲ್ ನ 45 ಓಸಿ ಡಿಲಕ್ಸ ವಿಸ್ಕಿ ಟೆಟ್ರಾ ಪ್ಯಾಕೆಟಗಳು ಇರುವುದು ಕಂಡುಬಂದಿತು. ಸದರಿ ಮದ್ಯವನ್ನು ಪಂಚರ ಸಮಕ್ಷಮ ನಿಪಿ1 ರಂತೆ ಅಮಾನತುಪಡಿಸಿಕೊಂಡೆವು. ನಿಪಿ1 ನ್ನು ಸಂಜೆ 07.35 ರಿಂದ 08.35 ಗಂಟೆಯವರೆಗೆ ಜೀಪಿನ ಬೆಳಕು ಮತ್ತು ಬೀದಿ ದೀಪದ ಬೆಳಕಿನ ಸಹಾಯದಿಂದ ಜರುಗಿಸಿರುತ್ತೇವೆ. ನಂತರ ಮಾಲು ಮತ್ತು ಪಂಚನಾಮೆಯೊಂದಿಗೆ ಪೊಲೀಸ್ ಠಾಣೆಗೆ ಬಂದು ನಾನು ಚಾಸಾ.8 ರವರಿಗೆ ನಿಪಿ2 ರಂತೆ ದೂರು ದಾಖಲು ಮಾಡಿದೆ. ನಂತರ ಚಾಸಾ6 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆಪಾದಿತನು ನನ್ನ ಮುಂದೆ ಹಾಜರಾಗದ ಮೇರೆಗೆ ಮತ್ತು ಆತನು ನೀರಿಕ್ಷಣಾ ಜಾಮೀನು ಪಡೆದುಕೊಂಡಿದ್ದರಿಂದ ಆತನನ್ನು ಸೂಕ್ತ ಭದ್ರತೆಯನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ. ನಂತರ ನಾನು ರಾಸಾಯನಿಕ ಪರೀಕ್ಷಾ ವರದಿಯನ್ನು ಸ್ವೀಕರಿಸಿರುತ್ತೇನೆ. ಸಾಕ್ಷಿಗೆ

ರಾಸಾಯನಿಕ ಪರೀಕ್ಷಾ ವರದಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ9 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ9(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮಾಲನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಅಪಾದಿತನನ್ನು ನೋಡಿ ಗುರುತಿಸಿದರು. ನಂತರ ಮುಂದಿನ ತನಿಖೆಯನ್ನು ಚಾಸಾ 8 ರವರು ನಡೆಸಿದ್ದು ಪುನಃ ಪ್ರಕರಣದ ಕಡತವನ್ನು ಪಡೆದುಕೊಂಡು ಆಪಾದಿತನ ವಿರುದ್ಧ ಸಾಕಷ್ಟು ಸಾಕ್ಷ್ಯದಾರಗಳು ಇದ್ದ ಕಾರಣ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಅಪಾದಿತನ ಪರ ಶ್ರೀ ಎಮ್ ಜಿ ಸಿ ವಕೀಲರಿಂದ**

ಬಾತ್ಮಿ ಬದಾಗ ಸಮಯ 04.30 ಗಂಟೆ ಆಗಿರಬಹುದು. ಸದರಿ ಸಮಯದಲ್ಲಿ ನಾನು ಬೋಗೆನಾಗರಕೊಪ್ಪ ಬಳಿ ಇದ್ದೆ. ಅಪಾದಿತನ ಚಹರೆಯನ್ನು ಬಾತ್ಮಿ ಹೇಳಿದವರು ಹೇಳಿಲ್ಲ. ಘಟನಾ ಸ್ಥಳಕ್ಕೆ ನಾವು ಒಟ್ಟು 3 ಜನ ಹೋದೆವು. ನನಗೆ ಘಟನಾ ಸ್ಥಳದ ಚೆಕ್ಕುಬಂದಿ ನಿಕರವಾಗಿ ಗೊತ್ತಿದೆ. ದಿಃ19.07.2021 ರಂದು ನಾವು ಯಾವುದೇ ಘಟನಾ ಸ್ಥಳಕ್ಕೆ ಹೋಗಿಲ್ಲ ಅಂದರೆ ಸರಿಯಲ್ಲ. ಅಪಾದಿತನಿಂದ ಯಾವುದೇ ಮದ್ಯವನ್ನು ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ನಿಪಿ1 ನ್ನು ಘಟನಾ ಸ್ಥಳದಲ್ಲಿ ಬರೆದಿಲ್ಲ ಅಂದರೆ ಸರಿಯಲ್ಲ. ಪಂಚರ ಸಮಕ್ಷಮ ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. ನಿಪಿ1 ನ್ನು ಪೊಲೀಸ್ ಠಾಣೆಯಲ್ಲಿ ಬರೆಯಲಾಗಿದೆ ಅಂದರೆ ಸರಿಯಲ್ಲ.

ಅಪಾದಿತನಿಗೂ ಮತ್ತು ಮು ಮಾ1 ಕ್ಕೂ ಯಾವೂದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ. ಅಂಕಿ ಸಂಖ್ಯೆಗಾಗಿ ಅಪಾದಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಅಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗಲು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ನಿಪಿ2 ರಿಂದ 9 ರಲ್ಲಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಠಾಣೆಯಲ್ಲಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**